

بِسْمِ اللّٰهِ الرَّحْمَنِ الرَّحِيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 23-11-2018 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇಂದಿನಿಂದ ಬದರೀ ಸಹಾಬರ ಬಗ್ಗೆ ಪ್ರಸ್ತಾಪಿಸುವುದನ್ನು ಪುನಃ ಪ್ರಾರಂಭಿಸುವೆನು. ಇಂದು ನಾನು ಪ್ರಸ್ತಾಪಿಸಲಿರುವ ಮೊದಲನೆಯ ಸಹಾಬಿ ಹಝ್ರತ್ ಸನಾನ್ ಬಿನ್ ಅಬೀ ಸನಾನ್ ರಝಿಯಲ್ಲಾಹು ಅನ್‌ಹು. ಬದರ್ ಸಮೇತ ಎಲ್ಲ ಯುದ್ಧಗಳಲ್ಲಿಯೂ ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆ ಸಹಭಾಗಿಯಾಗಿದ್ದರು. ಬೈಅತೆ ರಿಝ್ವಾನ್‌ನಲ್ಲಿ ಪ್ರಥಮವಾಗಿ ಬೈಅತ್ ಮಾಡಿದುದು ಯಾರು ಎಂಬ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಆದರೆ ವಾಖಿದಿ ಹೇಳಿರುವುದೇನೆಂದರೆ ಹಝ್ರತ್ ಸನಾನ್ ಬಿನ್ ಅಬೀ ಸನಾನ್(ರ) ಪ್ರಥಮವಾಗಿ ಬೈಅತ್ ಮಾಡಿದವರೆಂದು. ಬೈಅತ್ ರಿಝ್ವಾನ್ ಸಂದರ್ಭದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬೈಅತ್ ಪಡೆದುಕೊಳ್ಳಲು ಪ್ರಾರಂಭಿಸಿದಾಗ ಹಝ್ರತ್ ಸನಾನ್ ರಝಿಯಲ್ಲಾಹು ಅನ್‌ಹು ಕೈ ಮುಂದೆ ಒಡ್ಡಿ ನನ್ನ ಬೈಅತ್ ಪಡೆಯಿರಿ ಎಂದು ಹೇಳಿದರು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದರು: ನೀವು ಯಾವುದರ ಬಗ್ಗೆ ಬೈಅತ್ ಮಾಡುವಿರಿ ಎಂದು. ಹಝ್ರತ್ ಸನಾನ್(ರ) ಹೇಳಿದರು: ಜಯಗಳಿಸಲಿಕ್ಕೋಸ್ಕರ ಅಥವಾ ಶಹಾದತ್ ಪಡೆಯಲಿಕ್ಕೋಸ್ಕರ. ಆಗ ಇತರ ಜನರು ಸಹ ಹೇಳಿದರು ನಾವು ಸಹ ಇದೇ ವಿಷಯದ ಬಗ್ಗೆ ಬೈಅತ್ ಮಾಡುತ್ತೇವೆ ಎಂದು. ಹಝ್ರತ್ ಸನಾನ್ ಹಿರಿಯ ಸ್ಥಾನ ಪಡೆದ ಮುಹಾಜಿರ್ ಸಹಾಬರಲ್ಲಿ ಒಬ್ಬರಾಗಿದ್ದರು. ತುಲೈಹ ಬಿನ್ ಖುವೈಲಿದ್ ನುಬುವ್ವತ್ ವಾದವನ್ನು ಮಾಡಿದಾಗ ಅದರ ಬಗ್ಗೆ ಎಲ್ಲರಿಗಿಂತ ಮುಂಚಿತವಾಗಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಪತ್ರ ಬರೆದು ತಿಳಿಸಿದುದು ಹಝ್ರತ್ ಸನಾನ್(ರ). ಆಗ ಅವರು ಬನೂ ಮಾಲಿಕ್ ಗೋತ್ರದ ಮೇಲ್ವಿಚಾರಕರಾಗಿದ್ದರು.

ಇನ್ನೊಬ್ಬ ಸಹಾಬಿ ಹಝ್ರತ್ ಮಹ್‌ಜ(ರ). ಹಝ್ರತ್ ಉಮರ್‌ರ(ರ) ಗುಲಾಮರಾಗಿದ್ದರು. ಅವರು ಬದರ್ ಯುದ್ಧದಲ್ಲಿ ಶಹೀದ್ ಆದವರಲ್ಲಿ ಪ್ರಥಮರಾಗಿದ್ದರು. ಅವರು ಮಹಾಜಿರ್‌ಗಳ ಪ್ರಥಮ ತಂಡದಲ್ಲಿ ಸೇರಿದ್ದರು. ಹಝ್ರತ್ ಸಈದ್ ಬಿನ್ ಮುಸೀಬ್ ವರದಿ ಪ್ರಕಾರ ಹಝ್ರತ್ ಮಹ್‌ಜ ಶಹೀದರಾದಾಗ ಅವರು ಹೀಗೆ ಹೇಳಿದರು: **ವ ಅನ ಮಹ್‌ಜ ವ ಇಲಾ ರಬ್ಬೀ ಅರ್‌ಜಿಉ** – ನಾನು ಮಹ್‌ಜ, ನಾನು ನನ್ನ ಪ್ರಭುವಿನ ಕಡೆಗೆ ಮರಳುತ್ತಿದ್ದೇನೆ.

ಇನ್ನೊಬ್ಬ ಸಹಾಬಿ ಆಮಿರ್ ಬಿನ್ ಮುಖಲ್ಲದ್(ರ). ಅವರು ಬದರ್ ಮತ್ತು ಉಹುದ್‌ನಲ್ಲಿ ಹೋರಾಡಿದ್ದರು. ಉಹುದ್ ಯುದ್ಧದಲ್ಲಿ ಅವರು ಶಹೀದರಾದರು. ಇನ್ನೊಬ್ಬ ಸಹಾಬಿ ಹಝ್ರತ್ ಹಾತಿಬ್ ಬಿನ್ ಅಮ್ರ್ ಬಿನ್ ಅಬ್ದು ಶಮ್ಸ್(ರ). ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ದಾರು ಅರ್‌ಖಮ್‌ಗೆ ಆಗಮಿಸುವ ಮೊದಲೇ ಅವರು ಹಝ್ರತ್ ಅಬೂಬಕರ್ ಸಿದ್ದೀಖ್(ರ) ಮಾಡಿದ ತಬ್ಲೀಗ್‌ನಿಂದ ಇಸ್ಲಾಮಿಗೆ ಸೇರಿದ್ದರು. ಅವರು ಅಬಿಸೀನಿಯಾ ದೇಶಕ್ಕೆ ಎರಡು ಸಾರಿ ಹಿಜ್‌ರತ್ ಮಾಡಿದ್ದರು. ಒಂದು ವರದಿ ಪ್ರಕಾರ ಅಬಿಸೀನಿಯಾ ದೇಶಕ್ಕೆ ಹಿಜ್‌ರತ್ ಮಾಡಿದವರಲ್ಲಿ ಪ್ರಥಮ ವ್ಯಕ್ತಿ ಅವರಾಗಿದ್ದರು. ಬದರ್ ಯುದ್ಧದಲ್ಲಿ ಅವರು ತನ್ನ ಸಹೋದರ ಸುಲೈದ್ ಬಿನ್ ಅಮ್ರ್ ಜೊತೆ ಸೇರಿ ಯುದ್ಧದಲ್ಲಿ ಭಾಗವಹಿಸಿದ್ದರು. ಉಹುದ್ ಯುದ್ಧದಲ್ಲಿಯೂ ಭಾಗವಹಿಸಿದ್ದರು. ಹಝ್ರತ್ ಹಾತಿಬ್‌ರು ಹಝ್ರತ್ ಸೌದರನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ವಿವಾಹವಾಗುವಂತೆ ಮಾಡಿದರು. ಅವರು ಬೈಅತ್ ರಿಝ್ವಾನ್‌ನಲ್ಲಿಯೂ ಸೇರಿದ್ದರು.

ಇನ್ನೊಬ್ಬ ಸಹಾಬಿ ಹಝ್ರತ್ ಅಬೂ ಹಝೀಮ ಬಿನ್ ಔಸ್(ರ). ಅವರು ಬದರ್, ಉಹುದ್, ಖಂದಕ್, ಸಮೇತ ಎಲ್ಲ ಯುದ್ಧಗಳಲ್ಲಿ ಭಾಗವಹಿಸಿದ್ದರು. ಹಝ್ರತ್ ಉಸ್ಮಾನರ ಖಿಲಾಫತ್ ಕಾಲದಲ್ಲಿ ಅವರು ಮೃತರಾದರು. ಇನ್ನೊಬ್ಬ ಸಹಾಬಿ ಹಝ್ರತ್ ತಮೀಮ್ ಮೌಲಾ ಖರಾಶ್(ರ). ಅವರು ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಇನ್ನೊಬ್ಬ ಸಹಾಬಿ ಹಝ್ರತ್ ಮುಂಝಿರ್ ಬಿನ್ ಖದಾಮ(ರ). ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು.

ಇನ್ನೊಬ್ಬ ಸಹಾಬಿ ಹಝ್ರತ್ ಹಾರಿಸ್ ಬಿನ್ ಹಾತಿಬ್(ರ). ಹಝ್ರತ್ ಹಾರಿಸ್ ಬಿನ್ ಹಾತಿಬ್ ಮತ್ತು ಹಝ್ರತ್ ಅಬೂ ಲಬಾಬ ಬಿನ್ ಅಬ್ದುಲ್ ಮುಂಝಿರ್ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆ ಬದರ್ ಯುದ್ಧಕ್ಕೆ ಹೋಗುತ್ತಾ ಇದ್ದಾಗ ರೌಹ ಎಂಬ ಸ್ಥಳಕ್ಕೆ ತಲಪಿದಾಗ ಹಝ್ರತ್ ಅಬೂ ಲಬಾಬ ಬಿನ್ ಮುಂಝಿರ್‌ರನ್ನು ಮದೀನದ ಆಡಳಿತಾಧಿಕಾರಿಯನ್ನಾಗಿ ಮತ್ತು ಹಝ್ರತ್ ಹಾರಿಸ್ ಬಿನ್ ಹಾತಿಬ್‌ರನ್ನು ಬನೂ ಅಮ್ರ್ ಬಿನ್ ಔಫ್ ಗೋತ್ರದ ಅಮೀರರನ್ನಾಗಿ ನೇಮಿಸಿ ವಾಪಸು ಕಳುಹಿಸಿದರು. ಆದರೆ ಅವರಿಬ್ಬರನ್ನು ಬದರ್ ಯುದ್ಧದಲ್ಲಿ ಭಾಗವಹಿಸಿದವರಾಗಿ ಗಣಿಸಿ ಅವರಿಗೆ ಯುದ್ಧದ ಫಲವಾಗಿ ದೊರೆತ ಸಂಪತ್ತಿನಲ್ಲಿ ಪಾಲು ನೀಡಿದ್ದರು. ಹಝ್ರತ್ ಹಾರಿಸ್ ಬಿನ್ ಹಾತಿಬ್ ಬದರ್, ಉಹುದ್, ಖಂದಕ್, ಯುದ್ಧಗಳಲ್ಲಿಯೂ ಬೈಅತೆ ರಿಝ್ವಾನ್‌ನಲ್ಲಿಯೂ ಭಾಗವಹಿಸಿದವರಾಗಿದ್ದಾರೆ. ಖೈಬರ್ ಯುದ್ಧದ ವೇಳೆ ಒಬ್ಬ ಯಹೂದಿ, ಕೋಟೆಯ ಮೇಲಿನಿಂದ ಬಾಣ ಹೂಡಿದಾಗ ಅದು ಹಝ್ರತ್ ಹಾರಿಸ್ ಬಿನ್ ಹಾತಿಬರ ತಲೆಗೆ ತಾಗಿತು. ಆಗ ಅವರು ಶಹೀದರಾದರು.

ಹಝ್ರತ್ ಸಅಲಬ ಬಿನ್ ಝೈದ್(ರ) ಬನೂ ಖಝ್‌ರಜ್ ಎಂಬ ಅನ್‌ಸಾರ್ ಗೋತ್ರದವರಾಗಿದ್ದರು. ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಅವರು ಬಹಳ

ದೃಢನಿರ್ಧಾರ ಮಾಡುವ ಧೈರ್ಯಶಾಲಿಯೂ ಬಲಿಷ್ಠ ಹೃದಯಿಯೂ ಆಗಿದ್ದರು. ಹಝ್ರತ್ ಅಖಬ ಬಿನ್ ವಹಬ್(ರ) ಬದರ್, ಉಹುದ್, ಖಂದಕ್, ಸಮೇತ ಎಲ್ಲ ಯುದ್ಧಗಳಲ್ಲಿ ಭಾಗವಹಿಸಿದ್ದರು. ಮದೀನಕ್ಕೆ ಯಹೂದಿಯರ ಒಂದು ತಂಡ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಭೇಟಿಯಾಗಲು ಆಗಮಿಸಿತ್ತು. ಅವರಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಬ್ಲೀಗ್ ಮಾಡಿದಾಗ ಆ ಯಹೂದಿಯರು ಬಹಿರಂಗವಾಗಿ ತಿರಸ್ಕರಿಸಿದರು. ಆಗ ಕೆಲವು ಸಹಾಬಿಗಳು ಅವರ ವಿರುದ್ಧ ಪ್ರತಿಭಟಿಸಿದರು. ಆ ಸಹಾಬರಲ್ಲಿ ಹಝ್ರತ್ ಅಖಬ ಬಿನ್ ವಹಬ್ ಸೇರಿದ್ದರು.

ಹಝ್ರತ್ ಹಬೀಬ್ ಬಿನ್ ಅಸ್‌ವದ್(ರ) ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದ ಸಹಾಬಿಯಾಗಿದ್ದರು. ಇನ್ನೊಬ್ಬ ಸಹಾಬಿ ಹಝ್ರತ್ ಹಸೀಮ ಅನ್‌ಸಾರಿ(ರ). ಅವರು ಬದರ್, ಉಹುದ್, ಖಂದಕ್ ಸಮೇತ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದರು. ಹಝ್ರತ್ ಮುಆವಿಯ ಬಿನ್ ಅಬೂ ಸುಫ್‌ಯಾನರ ಅಧಿಕಾರದ ಕಾಲದಲ್ಲಿ ಅವರು ನಿಧನ ಹೊಂದಿದರು. ಹಝ್ರತ್ ರಾಫಿಅ್ ಬಿನ್ ಹಾರಿಸ್(ರ). ಬದರ್, ಉಹುದ್, ಖಂದಕ್ ಸಮೇತ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಹಝ್ರತ್ ಉಸ್ಮಾನ್(ರ)ರ ಖಿಲಾಫತ್ ಕಾಲದಲ್ಲಿ ಅವರು ನಿಧನ ಹೊಂದಿದರು. ಹಝ್ರತ್ ರಖೀಲ ಬಿನ್ ಅನ್‌ಸಾರಿ(ರ). ಅವರು ಒಬ್ಬ ಬದರೀ ಸಹಾಬಿಯಾಗಿದ್ದರು. ಅವರ ಹೆಸರು ವಿವಿಧ ರೀತಿಗಳಲ್ಲಿವೆ. ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಸಿಫ್ಫೀನ್ ಯುದ್ಧದಲ್ಲಿ ಅವರು ಹಝ್ರತ್ ಅಲಿಯವರ ಜೊತೆಗಿದ್ದರು.

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ ಬಿನ್ ರಿಯಾಬ್(ರ) ಒಬ್ಬ ಸಹಾಬಿಯಾಗಿದ್ದರು. ಮಕ್ಕಕ್ಕೆ ಆಗಮಿಸಿ ಮೊದಲು ಬೈಅತ್ ಮಾಡಿದ ಆರು ಅನ್‌ಸಾರ್‌ಗಳಲ್ಲಿ ಅವರೊಬ್ಬರಾಗಿದ್ದರು ಎಂದು ಹೇಳಲಾಗುತ್ತಿದೆ. ಅವರು ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನೇಕ ಹದೀಸುಗಳನ್ನು ಸಹ ವರದಿ ಮಾಡಿದ್ದಾರೆ. ಬೈಅತೆ ಅಖಬ ಊಲಾದಲ್ಲಿ ಅನ್‌ಸಾರ್‌ಗಳ ಪೈಕಿ ಪ್ರಥಮವಾಗಿ ಇಸ್ಲಾಮ್ ಸ್ವೀಕರಿಸಿದವರು ಅವರಾಗಿದ್ದರು.

ಹಝ್ರತ್ ಸಾಬಿತ್ ಬಿನ್ ಅಕ್‌ರಮ್ ಬಿನ್ ಸಅಲಬ(ರ). ಅವರು ಬದರ್ ಸಮೇತ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಮೌತ ಯುದ್ಧದಲ್ಲಿ ಹಝ್ರತ್ ಅಬ್ದುಲ್ಲಾ ಬಿನ್ ರವಾಹ ಶಹೀದರಾದಾಗ ಇಸ್ಲಾಮೀ ಪತಾಕೆಯನ್ನು ಹಝ್ರತ್ ಸಾಬಿತ್ ಬಿನ್ ಅಕ್‌ರಮ್ ಎತ್ತಿಕೊಂಡರು. ಅವರು ಹೇಳಿದರು: ಓ ಮುಸ್ಲಿಮರೇ ನಿಮ್ಮ ಪೈಕಿ ಒಬ್ಬನನ್ನು ನಿಮ್ಮ ನಾಯಕನನ್ನಾಗಿ ನೇಮಿಸಿರಿ. ಜನರು ಹೇಳಿದರು: ನಾವು ನಿಮ್ಮನ್ನು ನಮ್ಮ ನೇತಾರರನ್ನಾಗಿ ನೇಮಿಸುತ್ತೇವೆ. ಅವರು ಹೇಳಿದರು: ನಾನು ಆ ಹೊಣೆಗಾರಿಕೆ ಹೊರಲಾರೆ. ಆಗ ಜನರು ಹಝ್ರತ್ ಖಾಲಿದ್ ಬಿನ್ ವಲೀದರನ್ನು ತಮ್ಮ ನೇತರನನ್ನಾಗಿ ನೇಮಿಸಿದರು. ಚರಿತ್ರೆಯಲ್ಲಿ ಹೀಗೆ ವರದಿಯಾಗಿದೆ: ಮೌತ ಯುದ್ಧದ ಸಂದರ್ಭದಲ್ಲಿ ಮುಸ್ಲಿಮರು ಶತ್ರುಗಳ ಸೈನ್ಯವನ್ನು ಮತ್ತು ಅವರ ಸಾಧನ ಸಾಮಗ್ರಿಗಳನ್ನು ನೋಡಿದಾಗ ಶತ್ರುಗಳನ್ನು ಎದುರಿಸಲು ಪ್ರಾಯಶಃ ಸಾಧ್ಯವಾಗದು ಎಂದು ಭಾವಿಸಿದರು. ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ: ಶತ್ರುಗಳ ಸೈನ್ಯವನ್ನು ನೋಡಿದಾಗ ನನಗೆ ಕಣ್ಣುಗತ್ತಲು ಸಂಭವಿಸಿತು. ಆಗ ಹಝ್ರತ್ ಸಾಬಿತ್ ಬಿನ್ ಅಕ್‌ರಮ್ ಹೇಳಿದರು: ಓ ಅಬೂ ಹುರೈರ ನಿಮ್ಮ ಸ್ಥಿತಿ ನೋಡಿದಾಗ ನೀವು ಬಹಳ ದೊಡ್ಡ ಸೈನ್ಯ ನೋಡಿದಂತೆ ಭಾಸವಾಗುತ್ತದೆ. ನಾನು ಹೇಳಿದೆ: ಹೌದು. ಆಗ ಹಝ್ರತ್ ಸಾಬಿತ್ ಹೇಳಿದರು: ಬದರ್ ಯುದ್ಧದಲ್ಲಿ ನಮ್ಮ ಜೊತೆ ನೀವು ಸೇರಿರಲಿಲ್ಲವೇ? ಆ ಯುದ್ಧದಲ್ಲಿ ನಮಗೆ ಜಯಲಭಿಸಿದುದು ನಮ್ಮ ಸೈನ್ಯದ ಬಹುಸಂಖ್ಯೆಯ ಕಾರಣದಿಂದಲ್ಲ. ನಮಗೆ ಜಯ ಲಭಿಸಿದುದು ಅಲ್ಲಾಹನ ಅನುಗ್ರಹದಿಂದಾಗಿತ್ತು. ಈ ಯುದ್ಧದಲ್ಲಿಯೂ ಹಾಗೆಯೇ ಆಗುವುದು. ಹಝ್ರತ್ ಅಬೂಬಕರ್(ರ)ರವರ ಖಿಲಾಫತ್ ಕಾಲದಲ್ಲಿ ಹಝ್ರತ್ ಖಾಲಿದ್ ಬಿನ್ ವಲೀದರ ಜೊತೆ ಧರ್ಮತ್ಯಾಗಿಗಳ ವಿರುದ್ಧ ಹೋರಾಡಲು ಸಾಬಿತ್ ಬಿನ್ ಅಕ್‌ರಮ್ ಹೊರಟಿದ್ದರು. ಬದಾಖ ಎಂಬಲ್ಲಿಗೆ ತಲಪಿದಾಗ ಹಝ್ರತ್ ಅಕ್ಕಾಶ ಬಿನ್ ಮುಹ್‌ಸಿನ್ ಮತ್ತು ಹಝ್ರತ್ ಸಾಬಿತ್ ಬಿನ್ ಅಕ್‌ರಮರನ್ನು ಶತ್ರುಗಳ ಬಗ್ಗೆ ಸಮಾಚಾರ ತಿಳಿಯಲು ಗೂಢಚಾರರನ್ನಾಗಿ ಕಳುಹಿಸಲಾಯಿತು. ಅವರಿಬ್ಬರು ಕುದುರೆ ಸವಾರಿ ಮಾಡುತ್ತಾ ಹೋದಾಗ ತುಲೈಹ ಮತ್ತು ಅವನ ಸಹೋದರ ಸಲ್ಮಾ ಮುಸ್ಲಿಮ್ ಸೈನ್ಯದ ಸಮಾಚಾರ ತಿಳಿಯಲು ಬಂದು ಅವರನ್ನು ಎದುರಿಸಿದರು. ತುಲೈಹ ಹಝ್ರತ್ ಅಕ್ಕಾಶರನ್ನು ಎದುರಿಸಿ ಶಹೀದರನ್ನಾಗಿ ಮಾಡಿದನು. ಸಲ್ಮಾ ಹಝ್ರತ್ ಸಾಬಿತರನ್ನು ಶಹೀದರನ್ನಾಗಿ ಮಾಡಿದನು.

ಇನ್ನೊಬ್ಬ ಸಹಾಬಿ ಹಝ್ರತ್ ಸಲ್ಮಾ ಬಿನ್ ಸಲಾಮ(ರ). ಬದರೀ ಸಹಾಬಿಯಾಗಿದ್ದರು. ಮದೀನದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಮೊದಲು ನಂಬಿದವರಲ್ಲಿ ಸೇರಿದ್ದರು. ಅವರು ಬೈಅತೆ ಅಖಬ ಊಲಾ ಮತ್ತು ಸಾನಿಯದಲ್ಲಿ ಸೇರಿದ್ದರು. ಅವರು ಬದರ್ ಸಮೇತ ಎಲ್ಲ ಯುದ್ಧಗಳಲ್ಲಿ ಭಾಗವಹಿಸಿದ್ದರು. ಹಝ್ರತ್ ಉಮರ್ ತನ್ನ ಖಿಲಾಫತ್ ಕಾಲದಲ್ಲಿ ಅವರನ್ನು ಯಮಾಮದ ಆಡಳಿತಾಧಿಕಾರಿಯನ್ನಾಗಿ ನೇಮಿಸಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಸಲ್ಮಾ ಬಿನ್ ಸಲಾಮ ಮತ್ತು ಹಝ್ರತ್ ಅಬೂ ಸಬ್ರ ಬಿನ್ ಅಬೀ ರಹಮ್‌ರ ಜೊತೆ ಸಹೋದರ ಸಂಬಂಧ ಸ್ಥಾಪಿಸಿದ್ದರು. ಅವರು ಬಾಲ್ಯಕಾಲದಲ್ಲಿ ಒಬ್ಬ ಯಹೂದಿ ವಿದ್ವಾಂಸನಿಂದ ಮಕ್ಕದಲ್ಲಿ ಒಬ್ಬ ಪ್ರವಾದಿ ಆಗಮಿಸುವುದಾಗಿ ಸಮಾಚಾರ ಆಲಿಸಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರವಾದಿಯಾಗಿ ನಿಯೋಜಿತರಾದ ಸಮಾಚಾರ ಲಭಿಸಿದಾಗ ಅವರು ಅವರನ್ನು ನಂಬಿದರು. ಹಝ್ರತ್ ಉಸ್ಮಾನ್(ರ)ರ ಖಿಲಾಫತ್ ಕಾಲದಲ್ಲಿ ಪಿತೂರಿಗಳು ಪ್ರಾರಂಭವಾದಾಗ ಅವರು ಏಕಾಂತವಾಸ ಅವಲಂಬಿಸಿದರು. ಅವರು ತನ್ನ 74ನೇ ವಯಸ್ಸಿನಲ್ಲಿ ಮದೀನದಲ್ಲಿ ನಿಧನ ಹೊಂದಿದರು.

ಹಝ್ರತ್ ಜಬರ್ ಬಿನ್ ಅತೀಖ್(ರ). ಅವರು ಬದರ್ ಸಮೇತ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಹಝ್ರತ್

ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನ ಹೊಂದುವ ತನಕ ಅವರು ಮದೀನದಲ್ಲಿಯೇ ವಾಸಿಸುತ್ತಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಜಬರ್ ಬಿನ್ ಅತೀಕ್ ಮತ್ತು ಖಬಾಬ್ ಬಿನ್ ಅರತ್ ಮಧ್ಯೆ ಸಹೋದರ ಸಂಬಂಧವನ್ನು ಸ್ಥಾಪಿಸಿದ್ದರು. ಯಝೀದ್ ಬಿನ್ ಮುಆವಿಯ ಆಡಳಿತೆಗಾರನಾಗಿದ್ದಾಗ ಹಿಜರಿ 61ರಲ್ಲಿ ಅವರು ತನ್ನ 71ನೇ ವಯಸ್ಸಿನಲ್ಲಿ ನಿಧನ ಹೊಂದಿದರು.

ಹಝ್ರತ್ ಸಾಬಿತ್ ಬಿನ್ ಸಅಲಬ(ರ). ಅವರು ಎಪ್ಪತ್ತು ಅನ್‌ಸಾರ್‌ಗಳ ಜೊತೆ ಅಖಬ ಸಾನಿಯದಲ್ಲಿ ಭಾಗವಹಿಸಿದ್ದರು. ಅವರು ಬದರ್, ಉಹುದ್, ಖಂದಕ್, ಖೈಬರ್ ಮತ್ತು ಮಕ್ಕದ ವಿಜಯದಲ್ಲಿ ಸೇರಿದ್ದರು. ಅವರು ತಾಯಿಫ್ ಯುದ್ಧದಲ್ಲಿ ಶಹೀದರಾದರು. ಇನ್ನೊಬ್ಬ ಸಹಾಬಿ ಹಝ್ರತ್ ಸುಹೈಲ್ ಬಿನ್ ವಹಬ್(ರ). ಅವರು ಆರಂಭ ಕಾಲದಲ್ಲಿಯೇ ಮುಸ್ಲಿಮರಾದರು. ಅವರು ಅನಂತರ ಅಬಿಸೀನಿಯಾಕ್ಕೆ ವಲಸೆ ಹೋದರು. ಇಸ್ಲಾಮಿನ ಬಹಿರಂಗ ಪ್ರಚಾರ ಪ್ರಾರಂಭವಾದಾಗ ಮಕ್ಕಕ್ಕೆ ಮರಳಿದರು. ಮತ್ತು ಮದೀನಕ್ಕೆ ಹೋದರು. ಅವರು ಬದರ್, ಉಹುದ್, ಖಂದಕ್ ಸಮೇತ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರು ಮದೀನದಲ್ಲಿ ನಿಧನ ಹೊಂದಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರ ನಮಾಝೆ ಜನಾಝ ನಿರ್ವಹಿಸಿದರು. ಇನ್ನೊಬ್ಬ ಸಹಾಬಿ ಹಝ್ರತ್ ತುಫೈಲ್ ಬಿನ್ ಹಾರಿಸ್(ರ). ಅವರು ತನ್ನ ಸಹೋದರ ಹಝ್ರತ್ ಉಬೈದ ಮತ್ತು ಹಝ್ರತ್ ಹಸೀಬ್ ಜೊತೆಗೆ ಬದರ್, ಉಹುದ್, ಖಂದಕ್ ಸಮೇತ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಹಝ್ರತ್ ತುಫೈಲ್ ಬಿನ್ ಹಾರಿಸ್ ಮತ್ತು ಹಝ್ರತ್ ಮುಂಝಿರ್ ಬಿನ್ ಮುಹಮ್ಮದ್ ಮಧ್ಯೆ ಸಹೋದರ ಸಂಬಂಧವನ್ನು ಸ್ಥಾಪಿಸಲಾಗಿತ್ತು. ಅವರು ತನ್ನ 70ನೇ ವರ್ಷ ಪ್ರಾಯದಲ್ಲಿ ಹಿಜರಿ 32ರಲ್ಲಿ ನಿಧನ ಹೊಂದಿದರು.

ಇನ್ನು ಹಝ್ರತ್ ಅಬೂ ಸುಲೈದ್ ಅಸೀರತ್ ಬಿನ್ ಅಮರ್(ರ). ಅವರು ಬದರ್ ಸಮೇತ ಇತರ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರ ಪುತ್ರ ಅಬ್ದುಲ್ಲಾ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕತ್ತೆಯ ಮಾಂಸ ತಿನ್ನುವುದನ್ನು ನಿಷಿದ್ಧಗೊಳಿಸಿದರು. ಆ ಸಮಯದಲ್ಲಿ ದೊಡ್ಡ ಪಾತ್ರೆಗಳಲ್ಲಿ ಕತ್ತೆಯ ಮಾಂಸ ಬೇಯಿಸಲಾಗುತ್ತಿತ್ತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಜ್ಞೆ ಆಲಿಸಿದ ಕೂಡಲೆ ನಾವು ಪಾತ್ರೆಗಳನ್ನು ಅಡಿಮೇಲು ಮಾಡಿದೆವು.

ಇನ್ನೊಬ್ಬ ಸಹಾಬಿ ಹಝ್ರತ್ ಸಅಲಬ ಬಿನ್ ಹಾತಿಬ್ ಅನ್‌ಸಾರಿ(ರ). ಬದರ್, ಉಹುದ್ ಮತ್ತು ಬೇರೆ ಕೆಲವು ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರ ಬಗ್ಗೆ ಹೀಗೆ ವರದಿಯಾಗಿದೆ: ಅವರು ಒಮ್ಮೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೇಳಿದರು: ನನಗೆ ಸಂಪತ್ತು ದೊರಕಲಿಕ್ಕಾಗಿ ಪ್ರಾರ್ಥಿಸಿರಿ ಎಂದು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರ ವಿನಂತಿ ಅಂಗೀಕರಿಸಲಿಲ್ಲ. ಆದರೆ ಮೂರನೆಯ ಸಾರಿ ವಿನಂತಿಸಿದಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರಿಗೋಸ್ಕರ ಪ್ರಾರ್ಥಿಸಿದರು. ಆ ಪ್ರಾರ್ಥನೆಯ ಅನುಗ್ರಹದಿಂದ ಅವರಿಗೆ ಎಂತಹ ಸಂಪತ್ತು ದೊರಕಿತೆಂದರೆ ಅವರಿದ್ದ ಕಣಿವೆ ಪ್ರದೇಶ ಆಡುಗಳಿಂದ ತುಂಬಿದುವು. ಅವರಿಗೆ ಅಸರ್ ಮತ್ತು ಜುಮುಅ ನಮಾಝ್ ನಿರ್ವಹಿಸಲಾಗಲಿಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಝಕಾತ್ ವಸೂಲಿಗಾಗಿ ಜನರನ್ನು ಅವರ ಬಳಿಗೆ ಕಳುಹಿಸಿದಾಗ ಅವರು ನೆವನ ಹೇಳಿದರು. ಆಗ ಝಕಾತ್ ನೀಡದವರ ಬಗ್ಗೆ ಪವಿತ್ರ ಖುರ್‌ಆನಿನ ಆಜ್ಞೆಗಳು ಅವತೀರ್ಣಗೊಂಡವು.

(ಹುಝೂರ್ ಹೇಳಿದರು:) ಒಬ್ಬ ಬದರಿ ಸಹಾಬಿ ಬಗ್ಗೆ ಇಂತಹ ವರದಿ ಸರಿಯಾಗಿರದು ಎಂದು ನನಗೆ ತೋಚಿತು. ಏಕೆಂದರೆ ಬದರಿ ಸಹಾಬಿಗಳಿಗೆ ಮಗ್‌ಫಿರತ್ ದೊರೆತ ಬಗ್ಗೆ ಅಲ್ಲಾಹನು ಸಮಾಚಾರ ನೀಡಿರುತ್ತಾನೆ. ಅಲ್ಲಾಮ ಇಬ್ನು ಹಜರ್ ಅಸ್‌ಖಲಾನಿ ಈ ವಿಷಯದ ಬಗ್ಗೆ ಸಂಶೋಧನೆ ನಡೆಸಿದ್ದರು. ಇದು ಎರಡು ಸಮಾನ ಹೆಸರುಗಳ ಕಾರಣದಿಂದ ಸಂಭವಿಸಿದ ಪ್ರಮಾದವೆಂದು ಅವರು ಸಾಬೀತುಗೊಳಿಸಿದ್ದಾರೆ. ಅವರು ಹೇಳಿದರು, ಮೇಲಿನ ಸಂಭವ ಸಅಲಬ ಬಿನ್ ಅಬೀ ಹಾತಿಬ್‌ಗೆ ಸಂಬಂಧಿಸಿದೆ ಎಂದು. ಅಲ್ಲಾಮ ಇಬ್ನು ಹಜರ್ ಅಸ್‌ಖಲಾನಿ ಈ ವಿಷಯವನ್ನು ವಿಶದೀಕರಿಸಿದುದಕ್ಕೋಸ್ಕರ ಅಲ್ಲಾಹನು ಅವರಿಗೆ ಉತ್ತಮ ಪ್ರತಿಫಲ ನೀಡಲಿ. ಬದರೀ ಸಹಾಬಿ ಬಗ್ಗೆ ಮಾಡಲಾದ ಆರೋಪಗಳಿಂದ ಈ ಸಹಾಬಿಯನ್ನು ಅವರು ಮುಕ್ತರನ್ನಾಗಿ ಮಾಡಿದರು.

ಇನ್ನೊಬ್ಬ ಸಹಾಬಿ ಹಝ್ರತ್ ಸಅಲ್ ಬಿನ್ ಉಸ್ಮಾನ್ ಬಿನ್ ಖಲ್‌ದತ್ ಅನ್‌ಸಾರಿ(ರ). ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದರು. ಉಹುದ್ ಯುದ್ಧದಲ್ಲಿ ತಪ್ಪು ಮಾಡಿದ ಸಹಾಬರಲ್ಲಿ ಅವರು ಸೇರಿದ್ದರು. ಅಲ್ಲಾಹನು ಅವರೆಲ್ಲರಿಗೂ ಕ್ಷಮೆ ನೀಡಿದ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿ ಹೇಳಿದ್ದಾನೆ. ಅವರು ಮೃತರಾದಾಗ ಅವರ ಪ್ರಾಯ 80 ಆಗಿತ್ತು. ಇನ್ನೊಬ್ಬ ಸಹಾಬಿ ಹಝ್ರತ್ ಆಮಿರ್ ಬಿನ್ ಉಮಯ್ಯ(ರ). ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಉಹುದ್ ಯುದ್ಧದಲ್ಲಿ ಅವರು ಶಹೀದರಾದರು. ಹಝ್ರತ್ ಹಿಶಾಮ್ ಬಿನ್ ಆಮಿರ್ ವರದಿ ಮಾಡುತ್ತಾರೆ: ಉಹುದ್ ಯುದ್ಧದಲ್ಲಿ ಶಹೀದರಾದವರನ್ನು ದಫನ್ ಮಾಡುವ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ವಿಚಾರಿಸಿದಾಗ ಅವರು ಹೇಳಿದರು: ವಿಶಾಲವಾದ ಗೋರಿ ತೋಡಿ ಇಬ್ಬರ ಅಥವಾ ಮೂವರ ಮಯ್ಯಿತನ್ನು ದಫನ್ ಮಾಡಿರಿ. ಪವಿತ್ರ ಖುರ್‌ಆನ್ ಹೆಚ್ಚಾಗಿ ತಿಳಿದವರ ಮಯ್ಯತನ್ನು ಮೊದಲು ಗೋರಿಯಲ್ಲಿ ಇಳಿಸಿರಿ. ಆಗ ಹಝ್ರತ್ ಆಮಿರ್‌ರವರ ಮಯ್ಯಿತನ್ನು ಮೊದಲು ಗೋರಿಗೆ ಇಳಿಸಿ ಅನಂತರ ಅವರ ಜೊತೆ ಬೇರೆ ಇಬ್ಬರ ಮಯ್ಯಿತನ್ನು ಇಳಿಸಲಾಯಿತು.

ಹಝ್ರತ್ ಅಮರ್ ಬಿನ್ ಅಬೀ ಸರ್‌ಹ್(ರ). ಬದರ್, ಉಹುದ್, ಖಂದಕ್ ಮತ್ತು ಇತರ ಯುದ್ಧಗಳಲ್ಲಿ ಭಾಗವಹಿಸಿದ್ದರು. ಹಿಜರಿ ವರ್ಷ 30ರಲ್ಲಿ ಮದೀನದಲ್ಲಿ ಹಝ್ರತ್ ಉಸ್ಮಾನ್(ರ)ರ ಖಿಲಾಫತ್ ಕಾಲದಲ್ಲಿ ನಿಧನ

ಹೊಂದಿದರು. ಇನ್ನೊಬ್ಬ ಸಹಾಬಿ ಹಝ್ರತ್ ಅಸ್‌ಮಅ್ ಬಿನ್ ಹುಸೈನ್(ರ). ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದ ಸಹಾಬಿಯಾಗಿದ್ದರು. ಇನ್ನು ಹಝ್ರತ್ ಖಲೀಫ ಬಿನ್ ಅದೀ(ರ). ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಉಹುದ್ ಯುದ್ಧದ ನಂತರ ಅವರ ಹೆಸರು ಬೇರೆ ಯುದ್ಧಗಳಲ್ಲಿ ಪ್ರಸ್ತಾಪಿಸಲ್ಪಟ್ಟಿಲ್ಲ. ಹಝ್ರತ್ ಅಲಿಯವರ(ರ) ಖಿಲಾಫತ್ ಕಾಲದಲ್ಲಿ ಎಲ್ಲಾ ಯುದ್ಧಗಳಲ್ಲಿ ಅವರು ಭಾಗವಹಿಸಿದ್ದರು.

ಇನ್ನೊಬ್ಬ ಸಹಾಬಿ ಹಝ್ರತ್ ಮಆಝ್ ಬಿನ್ ಮಅಝಾನ್(ರ). ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರ ಸಹೋದರ ಆಯಿಝ್ ಬಿನ್ ಮಅಝ್ ಸಹ ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಬಿಅ್‌ರೆ ಮಊನದ ಘಟನೆಯಲ್ಲಿ ಅವರು ಶಹೀದರಾದರು. ಇನ್ನು ಹಝ್ರತ್ ಸಅದ್ ಬಿನ್ ಝೈದ್ ಅಲ್ ಅಶ್‌ಅರಿ(ರ). ಬದರ್ ಯುದ್ಧದಲ್ಲಿ ಭಾಗವಹಿಸಿದರು. ಅವರು ಬೈಅತೆ ಅಖಬದಲ್ಲಿ ಸೇರಿದ್ದರೆಂದು ಕೆಲವರು ಅಭಿಪ್ರಾಯ ಪಟ್ಟಿದ್ದಾರೆ. ಅವರು ಬದರ್, ಉಹುದ್, ಖಂದಕ್ ಸಮೇತ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಹೀಗೆ ವರದಿಯಾಗಿದೆ: ಹಝ್ರತ್ ಸಅದ್ ಬಿನ್ ಝೈದ್ ಒಂದು ನಜ್ರಾನಿ ಖಡ್ಗವನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಪಾರಿತೋಷಿಕವಾಗಿ ನೀಡಿದ್ದರು. ಅವರು ಆ ಖಡ್ಗವನ್ನು ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮರಿಗೆ ಕೊಟ್ಟು ಹೇಳಿದರು: ಇದನ್ನು ಬಳಸಿ ಅಲ್ಲಾಹನ ಮಾರ್ಗದಲ್ಲಿ ಜಿಹಾದ್ ಮಾಡಿರಿ. ಜನರು ಪರಸ್ಪರ ಭಿನ್ನಾಭಿಪ್ರಾಯ ಹೊಂದಿ ಕಲಹ ಮಾಡುವಾಗ ಈ ಖಡ್ಗವನ್ನು ಕಲ್ಲಿಗೆ ಬಡಿದು ಹಾಕಿ ಮನೆಗೆ ಹೋಗಿರಿ. ಎಂದರೆ ಯಾವುದೇ ಕಲಹ ಜಗಳಗಳಲ್ಲಿ ಭಾಗವಹಿಸಬಾರದು ಎಂದು.

ಇಂದಿನ ಕಾಲದಲ್ಲಿ ಒಬ್ಬರಿನ್ನೊಬ್ಬರ ಕೊರಳನ್ನು ಕತ್ತರಿಸುತ್ತಿರುವ ಮುಸ್ಲಿಮರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶಗಳನ್ನು ಅನುಷ್ಠಾನಕ್ಕೆ ತರುವವರಾಗಲಿ ಮತ್ತು ಲೋಕದಲ್ಲಿ ಶಾಂತಿ ಸ್ಥಾಪಿತವಾಗಲಿ.

ಅಲ್ಲಾಹನು ಈ ಸಹಾಬರ ಪದವಿಗಳನ್ನು ಉನ್ನತಗೊಳಿಸುತ್ತಾ ಇರಲಿ. ನಮಗೆ ಸಹ ಒಳಿತುಗಳನ್ನು ಮಾಡಲು ಮತ್ತು ಬಲಿದಾನಗಳನ್ನು ಮಾಡಲು ನಿಷ್ಠೆ ಮತ್ತು ಭಕ್ತಿಯಿಂದ ಜೀವಿಸಲು ಅಲ್ಲಾಹನು ಭಾಗ್ಯ ದಯಪಾಲಿಸಲಿ – ಆಮೀನ್.

———————*****———————

***Friday Sermon delivered by Hadrath Khaleefatul Masih Al Khamis***(*atba*)

*At,Masjid Baithul Futhuh London, UK. On 23-11-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***:*khutuba.kannada@gmail.com*

**You can find all the Sermons archived at**: www.alislam.org/friday-sermon